International Journal of Kannada Research
www.kannadajournal.com

ISSN: 2454–5813
IJKR 2024; 10(2): 91-96
© 2024 IJKR
www.kannadajournal.com
Received: 15-01-2024
Accepted: 18-02-2024

**ಪುಷ್ಪಲತಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕಿ
ವಿವೇಕಾನಂದ ಮಹಿಳಾ ಪದವಿ
ಕಾಲೇಜು ೧೬,೫ನೇ ಮುಖ್ಯರಸ್ತೆ,
ಶ್ರಿಕಂಠೇಶ್ವರ ನಗರ ಮಹಾಲಕ್ಷ್ಮೀ
ಲೇಔಟ್, ಬೆಂಗಳೂರು,
ಕರ್ನಾಟಕ, ಭಾರತ

Corresponding Author:
**ಪುಷ್ಪಲತಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕಿ
ವಿವೇಕಾನಂದ ಮಹಿಳಾ ಪದವಿ
ಕಾಲೇಜು ೧೬,೫ನೇ ಮುಖ್ಯರಸ್ತೆ,
ಶ್ರಿಕಂಠೇಶ್ವರ ನಗರ ಮಹಾಲಕ್ಷ್ಮೀ
ಲೇಔಟ್, ಬೆಂಗಳೂರು,
ಕರ್ನಾಟಕ, ಭಾರತ

# ಕನ್ನಡ ಸ್ತ್ರೀವಾದಿ ಚಿಂತಕಿಯರು

**ಪುಷ್ಪಲತಾ ಕೆ.ಪಿ**

**DOI:** https://doi.org/10.22271/24545813.2024.v10.i2b.969

**ಪೀಠಿಕೆ**

ಈ ಲೇಖನವು ಕನ್ನಡ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತಕಿಯರ ಚಿಂತನೆಗಳನ್ನು ಅವಲೋಕಿಸುವ ಉದ್ದೇಶವನ್ನು ಹೊಂದಿದೆ. ಅಲ್ಲದೇ ಸ್ತ್ರೀ ವಿಚಾರಗಳು ಯಾವ ಯಾವ ಕಾಲ ಘಟ್ಟಗಳಲ್ಲಿ ತನ್ನನ್ನು ಹೇಗೆ ಅಭಿವ್ಯಕ್ತಿಸಿ ಕೊಂಡಿತು ಎಂಬುದರ ಚಾರಿತ್ರಿಕ,ಸಾಂಸ್ಕೃತಿಕ,ಸಾಮಾಜಿಕ ಚರಿತ್ರೆಯನ್ನು ಕೆಲವು ಪ್ರಮುಖ ಕನ್ನಡ ಸ್ತ್ರೀವಾದಿ ಕೃತಿಗಳ ಹಾಗೂ ಸ್ತ್ರೀವಾದಿ ಚಿಂತಕಿಯರ ಲೇಖನಗಳಲ್ಲಿ ವ್ಯಕ್ತವಾದ ವಿಚಾರಗಳ ಮೂಲಕ ಗ್ರಹಿಸಿಕೊಳ್ಳಲು ಪ್ರಯತ್ನಿಸಲಾಗಿದೆ.ಈ ಚೌಕಟ್ಟು ಸ್ತ್ರೀವಾದಿ ಚಿಂತನೆ ಕನ್ನಡದಲ್ಲಿ ಪಡೆದುಕೊಂಡ ಆಯಾಮಗಳನ್ನು ಗುರುತಿಸಲು ಬಹಳ ಮುಖ್ಯ ಆಕರವಾಗುತ್ತದೆ. ಹಾಗಾದರೆ ಕನ್ನಡ ಸ್ತ್ರೀವಾದಿ ಚಿಂತಕಿಯರ ಚಿಂತನೆಯನ್ನು ಮುಂದೆ ವಿವರವಾಗಿ ತಿಳಿದುಕೊಳ್ಳಬಹುದು.

**ತಿರುಮಲಾಂಬ (೧೮೮೭)**

ಆದಿ ಚಿಂತಕಿ ತಿರುಮಲಾಂಬ ಪತ್ರಕರ್ತೆ ಮತ್ತು ಪ್ರಕಾಶಕಿಯೂ ಹೌದು. ೧೯೧೬ರಲ್ಲಿಯೇ 'ಮಹಿಳೆಯರಿಂದ ಮಹಿಳೆಯರಿಗಾಗಿ', 'ಕರ್ನಾಟಕ ನಂದಿನಿ' ಪತ್ರಿಕೆಯನ್ನು ಜಾರಿಗೆ ತಂದರು.೧೯೧೩ರಲ್ಲಿ 'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಪ್ರಕಟಿಸಿದರು, ಅನಂತರ,ನಭಾ, ವಿದ್ಯುಲ್ಲತಾ, ಚಂದ್ರವದನಾ, ಪೂರ್ಣಕಲಾ ಮೊದಲಾದ ಗ್ರಂಥಗಳನ್ನು ಪ್ರಕಟಿಸಿದರು.ಇವರ ಸಾಹಿತ್ಯವನ್ನು ಗಮನಿಸಿದಾಗ ಕಂಡು ಬರುವುದೇನೆಂದರೆ,ಸಾಂಪ್ರದಾಯಿಕ ಸಮಾಜದ ಪ್ರತಿನಿಧಿಯಾಗಿ ಹೆಣ್ಣಿನ ಜೀವನ ಚಿತ್ರಣವನ್ನು ಮಾಡುತ್ತಲೇ,ಅವಳಲ್ಲಿ ಇರಬೇಕಾದ ಆದರ್ಶ ಗುಣಗಳನ್ನು ಚಿತ್ರಿಸುತ್ತಲೇ, ಸ್ತ್ರೀಯರಿಗೆ ಶಿಕ್ಷಣ ಎಷ್ಟು ಮುಖ್ಯವಾದದ್ದು ಎಂಬುದನ್ನು ಕೂಡ ಗುರುತಿಸಿ,ಶಿಕ್ಷಣದಿಂದ ಮಾತ್ರ ಸ್ತ್ರೀಯರ ಉದ್ಧಾರ ಸಾಧ್ಯ ಎಂಬುದನ್ನು ಇವರು ಪ್ರತಿಪಾಧಿಸುತ್ತಾರೆ. ಅಷ್ಟರ ಮಟ್ಟಿಗೆ ವೈಚಾರಿಕ ಚಿಂತನೆಯನ್ನು ಪ್ರದರ್ಶಿಸಿದರೂ 'ವಿಧವಾ ವಿವಾಹ' ವಿಚಾರದಲ್ಲಿ ಹಿಂಜರಿ ಯುತ್ತಾ ಸಾಂಪ್ರದಾಯಕತೆಯ ಮೊರೆ ಹೋಗುತ್ತಾರೆ.

**ಆರ್.ಕಲ್ಯಾಣಮ್ಮ (೧೮೯೧)**

ತಿರುಮಲಾಂಬಾ ಅವರ ಸಮಕಾಲೀನ ಆರ್,ಕಲ್ಯಾಣಮ್ಮನವರು ಬಹುಮುಖೀ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿ ಸಿಕೊಂಡವರು.ಕಾದಂಬರಿ,ನಾಟಕ,ಮಕ್ಕಳಿಗಾಗಿ ಕೃತಿಗಳು,ಸಾಹಿತ್ಯಿಕ ಪತ್ರಿಕೆ,ಮಹಿಳೆಯರಿಗಾಗಿ 'ಶ್ರೀ ಶಾರದಾ ಸ್ತ್ರೀ ಸಮಾಜ' ಸ್ಥಾಪನೆ, ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಗತಿ ಪರವಾದ ವಿಚಾರವನ್ನು ನೀಡಿದರು.೧೯೧೭ ರಲ್ಲಿಯೇ 'ಸರಸ್ವತಿ' ಪತ್ರಿಕೆಯ ಉದ್ದೇಶವೇ 'ಭಾರತದ ಮಹಿಳೆಯರ ಇಹ ಪರ ವಿಜಯಾಭ್ಯುದಯಗಳನ್ನು ಬೋಧಿಸತಕ್ಕ ಲೇಖನಗಳಿಂದೊಡಗೂಡಿದ ಸಾಹಿತ್ಯ ಪತ್ರಿಕೆಯನ್ನು ಹೊರ ತರುವು ದಾಗಿತ್ತು. ಈ ಪತ್ರಿಕೆಯಲ್ಲಿ ಬರೆದ ವೈಚಾರಿಕ ಚಿಂತನೆಗಳಲ್ಲಿ ಸ್ತ್ರೀ ಶಿಕ್ಷಣವನ್ನು ಆರ್ಥಿಕ ಸ್ವಾವಲಂಬನೆಯನ್ನು ಪಡೆಯಬೇಕು ಎಂಬ ವಿಷಯವಿದ್ದರೂ ಅವೆಲ್ಲವೂ ಅವರ ಸಾಂಸಾರಿಕ ಜೀವನಕ್ಕೆ ಅನುಕೂಲ ವಾಗುವಂತಿರ ಬೇಕೆಂಬ ಸಾಂಪ್ರದಾಯಿಕ ನಿಲುವನ್ನು ತಳೆಯುತ್ತಾರೆ. ಮನೆಯ ಜಗತ್ತು-ಹೊರ ಜಗತ್ತು ಎರಡನ್ನು ಸ್ತ್ರೀಯು ನಿಭಾಯಿಸಿಕೊಂಡು ಹೋಗಬೇಕೆಂದು ಬರೆಯುತ್ತಾರೆ. ಸ್ತ್ರೀ ಶಿಕ್ಷಣ ನೀಡದೆ ಹೋದಲ್ಲಿ ಸಮಾಜ ಹೇಗೆ ದುಷ್ಪರಿ ಣಾಮಗಳನ್ನು ಎದುರಿಸುತ್ತದೆ ಎಂಬುದನ್ನು ಅವರ 'ಸ್ತ್ರೀ ಶಿಕ್ಷಣ ಕ್ರಮ' ಲೇಖನ ತಿಳಿಸುತ್ತದೆ.ಅದರಲ್ಲಿ ಇವರ ಸೃಜನೇತರ ಬರವಣಿಗೆಯನ್ನು ಕಾಣಬಹುದು.

**ತಿರುಮಲೆ ರಾಜಮ್ಮ (೧೯೦೦)**

ಇವರ "ಸ್ತ್ರೀ ವಿದ್ಯಾಭ್ಯಾಸ" ಲೇಖನವು ವೈಚಾರಿಕ ಚಿಂತನೆಯ ಮನೋಭಾವದಿಂದ ಕೂಡಿದೆ. "ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಾನ್ಯತೆ, ಸಮಾನಾಧಿಕಾರಕ್ಕೆ ಬಲ ಬರುವುದಾದರೆ ಅದಕ್ಕೆ ಮೂಲ ಕಾರಣ ಸ್ತ್ರೀ ಶಿಕ್ಷಣ, ಸ್ತ್ರೀ ಕುಲ ಜಾಗೃತಿ" ಎಂಬುದಾಗಲಿ, 'ಗೃಹ ಶಿಕ್ಷಣ'ದ ಆಚೆಗೂ ಹೊರಗಿನ ಪ್ರಪಂಚ ಜ್ಞಾನ, ಹೊರಗಿನ ವ್ಯವಹಾರ ಇದು ಸರ್ವರಿಗೂ ಅಗತ್ಯ ಎಲ್ಲ ಕ್ಷೇತ್ರಗಳ ಸುಧಾರಣೆ ಯಾಗಬೇಕು. ವಿದ್ಯಾ ಸಾಮರ್ಥ್ಯ ಬಹು ಮುಖವಾಗಿ ಕರ್ತವ್ಯ ನಿರ್ವಹಿಸಿ, ಸಮಾಜವನ್ನು ಕಟ್ಟಬೇಕು" ಎಂಬ ಮಾತುಗಳು' ರಾಜಮ್ಮನವರ ವಿಚಾರವಂತಿಕೆ ಚಿಂತನೆಯ ನಿದರ್ಶನ ಗಳಾ ಗಿವೆ. ಸ್ತ್ರೀಯರಿಗೆ ವ್ಯಕ್ತಿತ್ವ ನಿರ್ಮಾಣ ಮುಖ್ಯ ಎನ್ನುತ್ತಾರೆ.

**ಶ್ಯಾಮಲಾ ದೇವಿ ಬೆಳಗಾಂವಕರ (೧೯೧೦)**

ಉತ್ತರ ಕರ್ನಾಟಕದ ಮೊದಲ ತಲೆಮಾರಿನ ಬರಹಗಾರ್ತಿಯರಲ್ಲಿ ಪ್ರಮುಖರು ಶ್ಯಾಮಲಾ ದೇವಿಯವರು ಪ್ರಮುಖರು. ತಮ್ಮ ಪತಿ ನಡೆಸುತ್ತಿದ್ದ 'ಜಯ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿದ್ದರು ಜೊತೆಗೆ ಮಹಿಳಾ ಪರಿಷತ್ತು, ಮಕ್ಕಳಕೂಟ ಇತ್ಯಾದಿ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಇವರು "ಭಾರತದಲ್ಲಿ ಸ್ತ್ರೀಯರ ಚಳವಳಿ" ಎಂಬ ಲೇಖನದಲ್ಲಿ ಹೀಗೆ ಹೇಳು ತ್ತಾರೆ."ಆಧುನಿಕ ಭಾರತೀಯ ಸ್ತ್ರೀಗೆ ಕಾವ್ಯಮಯ ಕಲ್ಪನಾ ರಮ್ಯ ಸ್ವರ್ಗವಾಗಲಿ, ದೇವತೆಯೆಂಬ ಆರಾಧನೆ ಸಂಭೋದನೆಯಾಗಲಿ ಸೇರವು. ಜೀವನದ ವ್ಯವಹಾರಗಳಲ್ಲಿ ಮಾನ್ಯ ತೆಯ ಸ್ಥಾನ, ತನ್ನ ಭವಿಷ್ಯದ ನಿರ್ಧಾರ ಮಾಡುವ ಹಕ್ಕು ಇವು ಅವಳಿಗೆ ಬೇಕಾಗಿದೆ. ಆದುದರಿಂದಲೇ ಆಕೆ ಸಾಮಾಜಿಕ,ರಾಜಕೀಯ ಕ್ಷೇತ್ರಗಳಲ್ಲಿ ತನಗಿರುವ ಆತಂಕಗಳನ್ನು ತೆಗೆದು ಬಿಡಲು ಕೇಳಿ ಕೊಳ್ಳುವುದು,ಸ್ತ್ರೀಯೆಂದು ಅವಳು ಹೆಚ್ಚಿಗೆ ಕೂಡಿರೆನ್ನುವುದಿಲ್ಲ..! ಆದರೆ ನ್ಯಾಯವಾಗಿ ಸಲ್ಲ ಬೇಕಾದ್ದನ್ನು ಬಿಡುವುದಿಲ್ಲ. ನಮ್ಮ ಚಳುವಳಿ ಅವಿಧೇಯತೆಯ ಬಂಡುಗಾರಿಕೆಯ ಸ್ಪೂರ್ತಿಯಿಂದ ಹುಟ್ಟಿದ್ದಲ್ಲ; ಅದು 'ಪುರುಷ ವಿರೋಧಿ'ಯಾಗಿಲ್ಲ ಲಿಂಗ ದ್ವೇಷದಿಂದ ನಮ್ಮ ಆಂದೋಲನವು ಪ್ರೇರಿತವಾಗಿಲ್ಲವೆಂಬ ಮಾತು ನಮ್ಮ ಸ್ತ್ರೀಯರ ಸಮತೋಲನ ವೃತ್ತಿಗೆ ಸಾಕ್ಷಿಯಾಗಿದೆ.

**ಸರಸ್ವತಿಬಾಯಿ ರಾಜವಾಡೆಯವರು (೧೯೧೩)**

'ಗಿರಿಬಾಲೆ' ಎಂಬ ಹೆಸರಿನಿಂದ ಪ್ರಖ್ಯಾತರಾಗಿರುವ ಸರಸ್ವತಿಬಾಯಿ ರಾಜವಾಡೆಯವರು ಸ್ತ್ರಿಯರು ಆರ್ಥಿಕವಾಗಿ ಸಬಲರಾಗಬೇಕೆನ್ನುತ್ತಾರೆ. ಮಹಿಳೆಗೆ ಆರ್ಥಿಕ ಸೌಲಭ್ಯ ಸ್ವಯಾರ್ಜಿತ ಸಂಪಾದನೆಯಿಂದ ಬೇಕು ಎನ್ನುವ ಅಭಿ ಪ್ರಾಯವನ್ನು ಸರಸ್ವತಿಯವರು ವ್ಯಕ್ತ ಪಡಿಸುತ್ತಾರೆ.೧೯೫೨ರಲ್ಲಿ 'ಸುಪ್ರಭಾತ' ಪತ್ರಿಕೆ ಪ್ರಾರಂಭಿಸಿದರು.ಇದು "ಮಹಿಳಾ ಸಾಹಿತ್ಯದ ಪ್ರಗತಿ ಗಾಗಿ ಮೀಸಲಾದ ಪತ್ರಿಕೆ" ಎಂಬ ಉದ್ದೇಶದಿಂದ ಹೊರಡಿತು. ಅಂದು "ಸ್ತ್ರೀಯ ಸ್ವಾತಂತ್ರ್ಯ ವ್ಯಕ್ತಿತ್ವದ ಅಗತ್ಯ ಬಾಲ್ಯವಿವಾಹ, ವಿಧವಾ ವಿವಾಹ, ವಿಧವೆಯರ ಕೇಶ ಮುಂಡನ,ಗಂಡಸರ ಮರು ಮದುವೆ -ಇಂತಹ ವಿಷಯಗಳಲ್ಲಿ ಸ್ತ್ರಿಯರ ನಿಲುವು 'ಸುಪ್ರಭಾತ' ಪ್ರತ್ರಿಕೆಯಲ್ಲಿ ವ್ಯಕ್ತವಾಯಿತು.ಈ ವಿಚಾರಗಳು ಅಂದಿಗೆ ಕ್ರಾಂತಿಕಾರಿ ವಿಚಾರಗಳಾಗಿದ್ದವು.

ಸಮಾನ ಕೆಲಸಕ್ಕೆ ಸಮಾನ ವೇತನ, ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಮಪಾಲು ಮಹಿಳೆಯರಿಗೂ ಪುರುಷರಂತೆ ಜೀವನದ ವಿವಿಧ ಕ್ಷೇತ್ರಗಳಲ್ಲಿ ಅವಕಾಶ ನೀಡಿಕೆ ಮುಂತಾದ ವಿಚಾರ ಚಿಂತನೆಯ ಕುರಿತಂತೆ ಸರಸ್ವತಿಬಾಯಿಯವರು ಲೇಖನಗಳನ್ನು ಬರೆದಿದ್ದಾರೆ. 'ಹರಿ ಜನರ ಜ್ಞಾನಾರ್ಜನೆಗೆ ಅವಕಾಶ ಕಲ್ಪಿಸುವ ಮೂಲಕ, ಅವರ ಆರ್ಥಿಕ ಸ್ಥಿತಿ ಸುಧಾರಣೆಗೊಳ್ಳಲು ಅನುವು ಮಾಡುವ ಮೂಲಕ ಮಾತ್ರ ದಲಿತರ ಉದ್ಧಾರ ಸಾಧ್ಯ' ಎಂಬ ವಾಸ್ತವವಾದ ವೈಚಾರಿಕ ಚಿಂತನೆಯ ನಿಲುವನ್ನು ಅಂದೇ ಅವರು ತಮ್ಮ ಲೇಖನದಲ್ಲಿ ವ್ಯಕ್ತ ಪಡಿಸುವುದು ಅವರ ವೈಚಾರಿಕ ಚಿಂತನೆಗೆ ಸಾಕ್ಷಿಯಾಗಿದೆ.

**ಶಾಂತದೇವಿ ಮಾಳವಾಡ**

ಇವರು 'ಮಹಿಳೆಯರ ಆತ್ಮಶ್ರೀ', 'ಮಹಿಳೆಯರ ಚೇತನ','ಮಹಿಳೆಯರ ಅಲಂಕಾರ', 'ಸೊಬಗಿನ ಮನೆ' ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳಲ್ಲಿ ಮಹಿಳೆಯರ ಶೈಕ್ಷಣಿಕ,ಸಾಮಾಜಿಕ,ಆರ್ಥಿಕ ಮತ್ತು ಆಧ್ಯಾತ್ಮಿಕ ವಿವೇಚನೆಗೆ ಗಮನ ಕೊಡುವ ಬಗ್ಗೆ ಮಹಿಳೆಯರಿಗೆ ತಿಳುವಳಿಕೆ ನೀಡುವ ಪ್ರಯತ್ನವಿದೆ.

**ಡಾ.ಅನುಪಮಾ ನಿರಂಜನ**

ಇವರು ತಮ್ಮ ವೈದ್ಯಕೀಯ ವೃತ್ತಿಯ ಅನುಭವ ಮತ್ತು ತಿಳುವಳಿಕೆಯನ್ನು ತಮ್ಮ ಕೃತಿಗಳ ಮೂಲಕ ಮಹಿಳಾ ಲೋಕಕತ್ತಿದ್ದಾರೆ.ಅವರ 'ವಧುವಿಗೆ ಕಿವಿ ಮಾತು', 'ದಾಂಪತ್ಯ ದೀಪಿಕೆ', 'ಕೇಳು ಕಿಶೋರಿ', ಕೆಂಪಮ್ಮನ ಮಗು', 'ತಾಯಿ ಮಗು', 'ಆರೋಗ್ಯ ದರ್ಶನ' ಮೊದಲಾದ ಕೃತಿಗಳು ವೈದ್ಯಕೀಯ ವಿಚಾರಗಳೊಂದಿಗೆ ತಿಳುವಳಿಕೆಯನ್ನು ಮೂಡಿಸುವ ವೈಚಾರಿಕ ಕೃತಿಗಳಾಗಿವೆ. ಈ ಬಗೆಯ ಕೃತಿಗಳು ಅಂದಿನ ಕಾಲಕ್ಕೆ ಹೊಸ ಬಗೆಯದಾಗಿದ್ದವು.

**ಹೆಚ್.ಎಸ್.ಶ್ರೀಮತಿ(೧೯೫೦ ಪೆಬ್ರವರಿ ೨೫)**

ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಹೆಚ್.ಎಸ್.ಶ್ರೀಮತಿಯವರ 'ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು ಸಂದೇಹಗಳ"(೧೯೯೯) 'ಸ್ತ್ರೀವಾದ'(೨೦೦೩) ಈ ಕೃತಿಗಳ ಮೂಲಕ ಸ್ತ್ರೀವಾದವನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ. ಸಾಮಾಜಿಕ ಪ್ರಕ್ರಿಯೆ ಹೆಣ್ಣಿನ ಬದುಕನ್ನು ಶೂನ್ಯ ಮಾಡುವ ಕುರಿತು ತಮ್ಮ ಚಿಂತನೆಯನ್ನು ಬೆಳೆಸುವ ಶ್ರೀಮತಿಯವರು ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯು ಸ್ವತಂತ್ರ್ಯ ಅಸ್ತಿತ್ವವನ್ನು ಕಳೆದುಕೊಂಡು ಯಂತ್ರವಾಗುವ ರೀತಿಯನ್ನು ವಿವರಿಸುತ್ತಾರೆ. "ಅಸ್ತಿತ್ವದ ಪ್ರಶ್ನೆಗಳು ಭೂತ, ವರ್ತಮಾನ,ಭವಿಷ್ಯಗಳ ಕೊಂಡಿಗಳಿಂದ ಸಂಬಂಧಿತವಾದವು ನಿರ್ಬಂಧಗಳಿಂದ ಕೂಡಿರುವ ಸಾಮಾಜಿ ಕತೆಯಲ್ಲಿ ಮಹಿಳೆಯ ಚಲನ ಶೀಲತೆಗೆ ಅವಕಾಶಗಳಿಲ್ಲ" ಎನ್ನುವ ವಿಚಾರವನ್ನು ತಮ್ಮ ಕೃತಿಗಳಲ್ಲಿ ವ್ಯಕ್ತ ಪಡಿಸಿದ್ದಾರೆ.

**ಪ್ರಭಾವತಿ ಎಸ್.ವಿ.(೧೯೫೦ ಜುಲೈ ೨೫)**

ಪ್ರಭಾವತಿಯವರು ಸ್ತ್ರೀವಾದದ ಕುರಿತಂತೆ ಚಿಂತನೆ ಮಾಡಿದ "ಸ್ತ್ರೀವಾದದ ಪ್ರಸ್ತುತತೆ" (೨೦೦೦) ಎಂಬುದು ವಿಮರ್ಶಾ ಕೃತಿಯಾಗಿದೆ. ಅನೇಕ ಪತ್ರಿಕೆಗಳಲ್ಲಿ ಪ್ರಕಟ ಗೊಂಡಿರುವ ಇವರ ಲೇಖನಗಳು ಸ್ತ್ರೀವಾದಿ ದೃಷ್ಟಿಕೋನದಿಂದ ರಚನೆಯಾದವು. ಸ್ತ್ರೀವಾದಿ ಅರಿವಿನೊಂದಿಗೆ ಪುರಾಣದ ಸ್ತ್ರೀ ಪಾತ್ರಗಳನ್ನು ಸಮಕಾಲೀನವಾಗಿ ನೋಡುವ ವಿಶಿಷ್ಟ ಪ್ರಯತ್ನವನ್ನು ದ್ರೌಪದಿ, ಕುಂತಿ, ಅಹಲ್ಯೆ,ಯಶೋಧರಾ, ಶಕುಂತಲಾ, ಸೀತಾ ಮುಂತಾದ ಕಾದಂಬರಿಗಳಲ್ಲಿ ಮಾಡಿದ್ದಾರೆ.

**ಬಿ.ಎನ್.ಸುಮಿತ್ರಬಾಯಿ(೧೯೫೦ ಅಕ್ಟೋಬರ್೧೫)**

'ಕಲ್ಯಾಣ ಸರಸ್ವತಿ' ಮತ್ತು 'ಮರೆಯಲಾಗದ ಬರಹಗಾರರು', ಕಾತ್ಯಾಯಿನಿಯನ್ನು ಕುರಿತ ಕೃತಿಯನ್ನು ಸಂಪಾದಿಸುವುದರ ಮೂಲಕ ಅವಗಣನೆಗೆ ಒಳಗಾಗಿ ಹುಗಿದು ಹೋದ ಅಲಕ್ಷಿತ ಬರಹಗಾರ್ತಿಯರ ಕೃತಿಗಳ ಶೋಧನೆ ಮಾಡಿದರು. ಆರ್. ಕಲ್ಯಾಣಮ್ಮ,ಮತ್ತು ಎಚ್,ಎಸ್, ಕಾತ್ಯಾಯಿನಿ ಅವರ ಸಾಂಸ್ಕೃತಿಕ, ಸಾಧನೆಗಳನ್ನು ಶೋಧಿಸುವ ಮೂಲಕ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಕಟ್ಟಿ ಕೊಟ್ಟಿದ್ದಾರೆ.ಕರ್ನಾಟಕದ ಲೇಖಕಿಯರ ಸಂಘದ ಮೂಲಕ ಪ್ರಕಟಗೊಂಡ ಸುಮಿತ್ರಾ ಬಾಯಿ ಎನ್.ಗಾಯಿತ್ರಿ ಅವರು ಸಂಪಾದಿಸಿದ "ಸ್ತ್ರೀವಾದಿ ಪ್ರಕಾಶಿಕೆ" (೧೯೯೫) ಪಾಶ್ಚಾತ್ಯ ಚಿಂತಕಿಯರನ್ನು, ಸ್ತ್ರೀವಾದಿ ಪಂಥಗಳನ್ನು ಸ್ತ್ರೀವಾದ ಇತರ ಜ್ಞಾನ ಶಿಸ್ತುಗಳೊಂದಿಗೆ ಹೊಂದಿದ ಸಂಬಂಧವನ್ನು ಕನ್ನಡಿಗರಿಗೆ ಪರಿಚಯಿಸುವ ಕೆಲಸವನ್ನು ಮಾಡಿದೆ. "ಸ್ತ್ರಿವಾದ" (೧೯೯೯) "ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು" (೨೦೦೦) ಈ ಕೃತಿಗಳು

ಸ್ತ್ರೀವಾದದ ಸಿದ್ಧಾಂತವನ್ನು ಪರಿಚಯಿಸುತ್ತದೆ. ಕನ್ನಡದಲ್ಲಿ ಸ್ತ್ರೀವಾದಿ ವಿಮರ್ಶೆಯನ್ನು ಬೆಳೆಸುವಲ್ಲಿ ಇವರ ಪಾತ್ರ ಹಿರಿದು.

**ವಿಜಯಾದಬ್ಬೆ (೧೯೫೧ ಮಾರ್ಚ್-೩)**

ಸಾಂಸ್ಕೃತಿಕವಾಗಿ,ಸಾಮಾಜಿಕವಾಗಿ ಅಪಮೌಲ್ಯಕ್ಕೊಳಗಾಗಿ ಬದುಕನ್ನು ನಡೆಸುತ್ತಿರುವ ಮಹಿಳ ಬದುಕಿನ ಶೋಧವನ್ನು ಮುಖ್ಯವಾಗಿಟ್ಟುಕೊಂಡು ಹೊರಟ "ಸಂಸ್ಕೃತಿ ಚಿಂತಕಿ" ವಿಜಯಾದಬ್ಬೆಯವರು ತಮ್ಮ ನಿರಂತರವಾದ ಅಧ್ಯಯನ, ಅಧ್ಯಪನ, ಸಮತಾ ವೇದಿಕೆಯ ಮಹಿಳಾ ಅಧ್ಯಯನ-ಚಳುವಳಿ ಎರಡರಲ್ಲೂ ಸಕ್ರಿಯ ವಾಗಿ ತಮ್ಮನ್ನು ತೊಡಗಿಸಿ ಕೊಂಡವರು. ಕಳೆದು ಹೋದ, ಕಾಣದಾಗಿದ್ದ ಉದ್ದೇಶ ಪೂರ್ವಕವಾಗಿ ಹೂಳಲ್ಪಟ್ಟ ಲೇಖಕಿಯರ ಶೋಧವನ್ನು ಅವರು ಮಾಡಿದರು. ಅವರ ಕೃತಿಯನ್ನು ಐತಿಹಾಸಿಕ,ಸಾಮಾಜಿಕ ನೆಲೆಗಟ್ಟಿನಿಂದ ಗುರುತಿಸುವ ಹಾಗೂ ಸಾಹಿತ್ಯವನ್ನು ಹೊರ ತರುವ,ವಿಮರ್ಶಿಸುವ ಕೆಲಸವನ್ನು ದಬ್ಬೆಯವರು ಕೈಗೊಂಡರು ಆಮೂಲಯ ಯ್ಯಾನಿಸ್ ಪ್ರಾತ್ ಗುರುತಿಸುವಂತೆ 'ಪಾಯ ವಿಮರ್ಶೆ'ಯ ಮೂಲಕ ಅನೇಕ ಸಾಹಿತ್ಯಿಕ ವಾಚಿಕೆಗಳನ್ನು ರಚಿಸಿದರು.'ಶಾಮಲಾ ಸಂಚಯ' (೧೯೮೯) 'ಹಿತೈಷಿಣಿಯ ಹೆಜ್ಜೆಗಳು' (೧೯೯೨) 'ಸಾರ ಸರಸ್ವತ' (೧೯೯೬) 'ಅನುಪಮಾ ನಿರಂಜನ' (೧೯೯೮) ಈ ಸಾಹಿತ್ಯ ವಾಚಿಕೆಗಳ ಮೂಲಕ ಹಿರಿಯ ಲೇಖಕಿಯರ ನೆಲೆ ಬೆಲೆ ಗಳನ್ನು ಗುರುತಿಸಿಕೊಳ್ಳಲು ಸಹಾಯ ಮಾಡಿದರು.

ದಬ್ಬೆಯವರು ವಚನ ಕಾರ್ತಿಯರ ವಚನಗಳನ್ನು ಸ್ತ್ರೀವಾದಿ ವಿಮರ್ಶೆಯ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಸ್ತ್ರೀವಾದ ಪರಿಭಾಷೆಯನ್ನು ವಿವರಿಸುವಂತ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪಾಶ್ಚಾತ್ಯ ಮಹಿಳಾ ಚಿಂತಕಿಯರನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ. 'ಮಹಿಳಾ ಸಾಹಿತ್ಯ ಸಮಾಜ', 'ನಾರಿ ದಾರಿ ದಿಗಂತ' ಈ ಕೃತಿಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳಾಗಿವೆ. 'ಕರ್ನಾಟಕದ ಲೇಖಕಿಯರ ಸಂಘ' ವನ್ನು ಬೆಳೆಸುವಲ್ಲಿ ಇವರ ಪಾತ್ರವೂ ಹಿರಿದು.ಮಹಿಳ ಪರಿಸರ-ಸಾಹಿತ್ಯ ಕಾರ್ಯಕ್ರಮದ ಮೂಲಕ ಮಹಿಳಾ ಸಾಹಿತ್ಯ ಚರಿತ್ರೆ ರಚನೆಯಾಗಬೇಕು. ಮಹಿಳೆಯರ ಸಾಹಿತ್ಯ ಕಾಣಿಕೆ ಸೂಕ್ಷ್ಮವಾಗಿ ದಾಖಲಾಗಬೇಕು ಎಂಬ ಆಶಯ ದಬ್ಬೆಯವರದು. ಈ ಕಾರ್ಯಕ್ರಮ ಮುಂದೆ ಲೇಖ ಲೋಕದ ರೂಪದಲ್ಲಿ ದಾಖಲಾಗಿ ಮಹಿಳಾ ಆತ್ಮ ಕಥನಗಳ ರೂಪದಲ್ಲಿ ಹೊರ ಬಂದವು.

**ಗಾಯತ್ರಿನಾವಡ (೧೯೫೪ ಅಗಸ್ಟ್ ೭)**

"ಕರಾವಳಿ ಜನಪದ ಸಾಹಿತ್ಯದಲ್ಲಿ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು"(೧೯೯೯) ಗಾಯತ್ರಿ ನಾವಡರವರ ಪಿ,ಹೆಚ್,ಡಿ ಸಂಶೋಧನಾ ಗ್ರಂಥ "ಭಾರತೀಯ ಸ್ತ್ರೀವಾದ ಒಂದು ಸಂಕಥನ"(೨೦೦೦) "ಮಹಿಳಾ ಸಂಕಥನ" (೨೦೦೩) ಇವು ಇನ್ನಿತರ ಕೃತಿಗಳು. ಜನಪದ ಸಾಹಿತ್ಯದಲ್ಲಿ ಒಲವುಳ್ಳ ಇವರು ಭಾರತೀಯ ಸ್ತ್ರೀವಾದದ ಮೂಲ ಸೆಲೆಗಳು ಜನಪದ ಸಾಹಿತ್ಯದಲ್ಲಿರುವುದನ್ನು ಕುರಿತು ಹೇಳುತ್ತಾರೆ."ಸ್ತ್ರೀವಾದ ಸಂವಾದ"ಲೇಖನದಲ್ಲಿ ಭಾರತೀಯ ಸ್ತ್ರೀವಾದದ ಹುಡುಕಾಟ ನಡೆಯ ಬೇಕಾದುದು ಎರಡು ನೆಲೆಗಳಲ್ಲಿ ಒಂದು ಸಂಸ್ಕೃತಿಯಲ್ಲಿನ ಲಿಂಗಭೇದವನ್ನು ವಿವಕ್ಷೆಯನ್ನು ಗುರುತಿಸುವುದು ಮತ್ತು ಪ್ರತಿಭಟಿಸುವುದು ಎರಡು ಸಂಸ್ಕೃತಿಯಲ್ಲಿನ ಸ್ತ್ರೀಶಕ್ತಿಯ ಸ್ವಾಯತ್ತ ಸ್ಥಿತಿ ಯನ್ನು ಮಾದರಿಗಳಲ್ಲಿ ಶೋಧಿಸುವುದು ಮತ್ತು ಬಳಸಿಕೊಳ್ಳುವುದು.ಈ ಸಂಕೀರ್ಣತೆಯಲ್ಲಿಯೇ ಹೆಣ್ಣಿನ ಹೊಸ ಚರಿತ್ರೆ ಕಟ್ಟುವುದು ಭಾರತೀಯ ಸ್ತ್ರೀವಾದ ರೂಪುಗೊಳ್ಳ ಬೇಕಾದ ತಾತ್ವಿಕ ನೆಲೆ ಎನ್ನುತ್ತಾರೆ.

**ಮಲ್ಲಿಕಾ ಘಂಟಿ (೧೯೫೯ ಏಪ್ರಿಲ್೧೭)**

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಕುಲಪತಿಯಾಗಿ ಸೃಜನ ಶೀಲ ಕೃತಿ ಗಳು,ಸಂಶೋಧನೆ ಹೋರಾಟಗಳ ಮೂಲಕ ಸ್ತ್ರೀವಾದಿ ಚಿಂತನೆಯನ್ನು ಬೆಳೆಸಿದವರು ದಲಿತಪರ ಧ್ವನಿಯಾಗಿ ಸೇವೆ ಸಲ್ಲಿಸಿ ದವರು.ಮಹಿಳಾಪರ ಗಟ್ಟಿ ನಿಲುವುಗಳನ್ನು ತಮ್ಮ ಬರಹ, ಭಾಷಣ ಹೋರಾಟಗಳ ಮೂಲಕ ವ್ಯಕ್ತ ಪಡಿಸಿದ್ದಾರೆ."ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ" (೧೯೯೦) ಇವರ ಸಂಶೋಧನಾ ಪ್ರಬಂಧ ಮಹಿಳಾ ಕಥಾ ಸಾಹಿತ್ಯವನ್ನು ಗುರುತಿಸುವಲ್ಲಿ ಅವರ ಸ್ತ್ರೀಪರ ದೃಷ್ಟಿಕೋನ ಕೆಲಸ ಮಾಡಿದೆ. ಧರಣಿಯ ಮೇಲೊಂದು' ವಿಮರ್ಶೆಯ ಸಂಕಲನ,'ತನು ಕರಗದವರಲ್ಲಿ' (೨೦೦೦) ಕೃತಿಯು ವಚನ ಚಳುವಳಿಯ ಸಂದರ್ಭ ಮತ್ತು ಸಮಕಾಲೀನ ಸಂದರ್ಭದಲ್ಲಿ ಇರುವ ಲಿಂಗ ಅಸಮಾನತೆಯನ್ನು ಕುರಿತು ಚರ್ಚಿಸುತ್ತಾರೆ.ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಿರುವಂತೆ "ಲಿಂಗಧಾರಿತ ತಾರತಮ್ಯವು ಮಹಿಳೆಯರ ಪ್ರಜ್ಞೆಯ ಭಾಗವಾಗುವುದು ಒಂದು ನೆಲೆಯಾಗಿದರ ನಿವಾರಣೆಗೆ ಹೋರಾಟ ನಡೆಸುವುದು

ಮತ್ತೊಂದು ನೆಲೆ,ಈ ಎರಡೂ ನೆಲೆಗಳಿಂದ ಸಾಹಿತ್ಯದ ಅವಲೋಕನವನ್ನು ತನು ಕರಗದವರಲ್ಲಿ ಕೃತಿಯು ಮೂಡಿದೆ.

**ಸಬಿಹ ಭೂಮಿಗೌಡ (೧೯೫೯ ಜುಲೈ೪)**

ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸಬಿಹಾ ಅವರು ಸ್ತ್ರೀವಾದಿ ಚಿಂತನೆ-ಬರಹಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು."ಲಿಂಗತ್ವ ಸಮ ನ್ಯಾಯದೆಡೆಗೆ" ಕೃತಿಯು ಸಾಮಾಜೀ ನಕರಣ ಪ್ರಕ್ರಿಯೆಯಲ್ಲಿ ಸ್ತ್ರೀ ವಿದ್ಯಾಭ್ಯಾಸ ಹೊಂದಿರುವ ನೆಲೆಗಳನ್ನು ಅಧ್ಯಯನ ಮಾಡುತ್ತದೆ. 'ನಿಲುಮೆ'ಕೃತಿಯು ಮೂರು ಭಾಗಗಳನ್ನು ಹೊಂದಿದ್ದು ಭಾಗ-೧ರಲ್ಲಿ ಮಹಿಳಾಚಿಂತನೆ,ಭಾಗ-೨ರಲ್ಲಿ ಮಹಿಳಾ ಬರಹಗಾರ್ತಿಯರ ಬರಹ ಮತ್ತು ಭಾಗ-೩ರಲ್ಲಿ ಸಾಹಿತ್ಯ ವಿಮರ್ಶೆ ಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮಾಡಿದ್ದಾರೆ."ಕನ್ನಡ ಸಾಹಿತ್ಯ ಮತ್ತು ಮಹಿಳೆ" ಮಹಿಳಾ ಆತ್ಮ ಕತೆಗಳು ಮತ್ತು ಮಹಿಳಾ ಅಧ್ಯಯನಕ್ಕೆ ಸಂಬಂದಿಸಿದ ಅನೇಕ ಕೃತಿಗಳ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಮಹಿಳಾ ಸಮಸ್ಯೆಗಳನ್ನು ಕುರಿತ ಪ್ರಕರಣಗಳನ್ನು ದಾಖಲಿಸುವ ಮಹತ್ವದ ಕೆಲಸ ಮಾಡಿದ್ದಾರೆ."ಕೋಮುವಾದ ಮತ್ತು ಮಹಿಳೆ" ಎಂಬ ಲೇಖನದಲ್ಲಿ ಕೋಮುವಾದದ ಹಿಂಸೆ ಮಹಿಳೆಯ ಮೇಲಾಗುವ ರೀತಿಯನ್ನು ಗುರುತಿಸುತ್ತಾರೆ. ಎಲ್ಲಾ ಕೋಮುಗಳಲ್ಲೂ ಹೆಣ್ಣು ವಸ್ತುವೇ ಆಗುವುದನ್ನು ಗ್ರಹಿಸಿ ಕೊಮುವಾದದ ವಿರುದ್ಧ ಹೋರಾಡಲು ವಿವಿಧ ಸಮುದಾಯಗಳ ಮಹಿಳೆಯರನ್ನು ಒಗ್ಗೂಡಿಸಬೇಕಾದ ತುರ್ತು ಹೆಚ್ಚಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ.

**ಎನ್.ಗಾಯಿತ್ರಿ**

"ಅಚಲಾ" ಎಂಬ ಸ್ತ್ರೀವಾದೀ ಪತ್ರಿಕೆಯ ಸಂಪಾದಕರಾಗಿ ಮಹಿಳವಾದವನ್ನು ಬೆಳೆಸಿದ ಎನ್.ಗಾಯಿತ್ರಿ ಅವರದು ಮಹಿಳಾ ವಿಚಾರ ಸಾಹಿತ್ಯದಲ್ಲಿ ದಾಖಲಿಸಬೇಕಾದ ಹೆಸರು ಮಾರ್ಕ್ಸ್ ವಾದಿ ಚಿಂತನೆಗಳಲ್ಲಿ ಆಸಕ್ತಿ ಹೊಂದಿ ವರ್ಗ ಮತ್ತು ಸಾಮಾಜಿಕ ಅಸಮಾನತೆಗಳನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತ ಬಂದ ಗಾಯಿತ್ರಿಯವರು ತಮ್ಮ ಬದುಕು ಬರಹ ಎರಡರಲ್ಲಿಯೂ ಈ ಅಂಶಗಳನ್ನು ಕಾಣಿಸುತ್ತಾರೆ. ಸಕ್ರಿಯವಾಗಿ ಕ್ರಿಯವಾದಿಯೂ ಆಗಿ ತಮ್ಮನ್ನು ತಾವು ಕಾರ್ಯಕರ್ತೆಯಾಗಿಯೂ ಗುರುತಿಸಿಕೊಂಡಿದ್ದಾರೆ. "ಮಹಿಳೆ ಬಿಡುಗಡೆ ಹಾದಿಯಲ್ಲಿ" ಗಾಯಿತ್ರಿಯವರ ಗಮ ನಾರ್ಹ ಕೃತಿ. ಈ ಪುಸ್ತಕವು ಮುಖ್ಯವಾಗಿ ಮಹಿಳಾ ಸಮಸ್ಯೆಯನ್ನು ಸಾಮಾಜಿಕವಾಗಿ,ರಾಜಕೀಯವಾಗಿ ನೋಡಲು ಬಯಸುತ್ತದೆ ಚಾರಿತ್ರಿಕವಾದ ಗತಿಯಲ್ಲಿ ಹೆಣ್ಣಿನ ಸುಪ್ತ ಚರಿತ್ರೆಯನ್ನು ಅರಿಯ ಬೇಕೆನ್ನುವ ಮೂಲಕ ಎಡಪಂಥೀಯ ಧೋರಣೆಯನ್ನು ಸ್ತ್ರೀವಾದಿ ಚಿಂತನೆಯಲ್ಲಿ ತರುತ್ತಾರೆ.

**ಸಾ.ರಾ.ಅಬೂಬಕರ್**

"ಚಂದ್ರ ಗಿರಿಯ ತೀರದಲ್ಲಿ " ಕೃತಿಯ ಮೂಲಕ ಕನ್ನಡಿಗರಿಗೆ ಪರಿಚಿತರಾದ ಸಾ,ರಾ ಕಾದಂಬರಿ ಗಾರ್ತಿ,ಕತೆಗಾರ್ತಿ ಯಾಗಿ ಹೆಸರು ಮಾಡಿರುವಂತೆಯೇ ತಮ್ಮ ವೈಚಾರಿಕ ಲೇಖನಗಳ ಮೂಲಕವೂ, ಪ್ರಖರವಾದ ಚಿಂತಕಿಯೂ ಪ್ರಸಿದ್ಧರಾಗಿದ್ದಾರೆ.ಮುಸ್ಲಿಂ ಹೆಣ್ಣು ಶಾಲೆ ಕಲಿತ ಸಂಗತಿಯನ್ನು ನವಿರಾಗಿ ನಿರೂಪಿಸಿದ ಸಾ.ರಾ,ಅಲ್ಲಿ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವಕ್ಕೆ ಧಕ್ಕೆ ತರುವ ಮೂಲಭೂತವಾದಿ ಧೋರಣೆಯನ್ನು ಸೌಮ್ಯವಾಗಿಯೇ ಖಂಡಿಸಿದರು.ಅನಂತರ ವಸಹತೋತ್ತರ ಭಾರತದ ಕಾಲದಲ್ಲಿ ಹಿಂದೂ ಮುಸ್ಲಿಂ ಘರ್ಷಣೆ ಎನ್ನುವುದು ಬಹು ಸೂಕ್ಷ್ಮ ಸಂಗತಿಯಾಗಿ ಪ್ರಜ್ಞಾವಂತರನ್ನು ಕಾಡುತ್ತಿರುವಾಗ ಸಾ.ರಾ ಅವರು ತಮ್ಮ ಪ್ರಜಾಪ್ರಭುತ್ವವಾದೀ ನಿಲುವನ್ನು ನೇರವಾಗಿಯೇ ಪ್ರಕಟಿಸಿದರು. ಇಂದಿಗೂ ಆ ಮೌಲ್ಯದಲ್ಲಿಯೇ ನಂಬಿಕೆಯಿಟ್ಟ ಸಾ.ರಾ.ಅಬೂಬಕರ್ ಅವರು ತಮ್ಮ ಸಾಹಿತ್ಯೇತರ ಕೃತಿಗಳಲ್ಲಿ ಪ್ರಖರವಾದ ವಿಚಾರಗಳಿಂದ ಅದನ್ನು ತೋರ್ಪಡಿಸುತ್ತ ಬಂದಿದ್ದಾರೆ.

**ಕೆ.ಷರೀಪಾ**

ಕೆ.ಷರೀಪಾ ಅವರು ಕವಯತ್ರಿಯಾಗಿ,ವಿಚಾರವಾದಿ ಲೇಖಕಿಯಾಗಿ ಪರಿಚಿತರು.ಅವರ ಕವನಗಳು ಬಂಡಾಯದ ತೀವ್ರ ಆಕ್ರೋಶ ವಿಷದ ಮತ್ತು ಸಂಕಟಗಳನ್ನು ಹೊಂದಿರುವಂತೆ ಅವರ ಬರಹಗಳು ಸಹ ಬಂಡಾಯದ ಸ್ವರೂಪ ವನ್ನು ಪಡೆದುಕೊಂಡಿವೇ ಆಗಿವೆ.ಷರೀಪಾ ಅವರ ವೈಚಾರಿಕ ಲೇಖನಗಳು ಮುಸ್ಲಿಂ ಹೆಣ್ಣಿನ ಮೇಲೆ ನಡೆಯುತ್ತಿರುವ ಧಾರ್ಮಿಕ ಮತ್ತು ಸಾಮಾಜಿಕ ಅನ್ಯಾಯಗಳನ್ನು ಕುರಿತಂತೆ ಇವೆ.ಅವರು "ಬಂಡಾಯ ಮುಸ್ಲಿಂ ಸಂವೇದನೆ" ಎನ್ನುವ ಕೃತಿಯಲ್ಲಿ ಷರೀಪಾ ಹೊಸ ಸಾಮಾಜಿಕ ಪರಿಸರದಲ್ಲಿ ಮುಸ್ಲಿಂ ಮಹಿಳೆಯ ಪಾತ್ರವನ್ನು ವಿಶ್ಲೇಷಿಸು ತ್ತಾರೆ.ಈ ಕೃತಿಯಲ್ಲಿ ಬದಲಾವಣೆಗೆ ತುತ್ತಾಗಿರುವ ಮುಸ್ಲಿಮ

ಸಮಾಜದಲ್ಲಿ ಮಹಿಳೆಯರ ಸ್ಥಿತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮುಸ್ಲಿಂ ಬರಹಗಾರರನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಜಾಗತೀಕರಣದ ಸಂದರ್ಭದ ಹಿನ್ನೆಲೆಯಲ್ಲಿ ಮಹಿಳೆಯರ ಪ್ರತಿನಿಧೀಕರಣವನ್ನು ಕುರಿತು ಅವರು ಮಾಡಿದ ಅಧ್ಯಯನವನ್ನು ಇಲ್ಲಿ ಹೆಸರಿಸ ಬಹುದಾಗಿದೆ. ಮಹಿಳೆ ಮತ್ತು ಶೋಷಣೆಯ ಬಗ್ಗೆ ತಮ್ಮ ಚಿಂತನೆಗಳನ್ನು ಹಲವಾರು ಲೇಖನಗಳ ಮೂಲಕ ಪ್ರಕಟಿಸಿದ್ದಾರೆ.

ಹೀಗೆ ಸ್ತ್ರೀವಾದಿ ಚಿಂತನೆ ಒಂದು ಸಮಷ್ಠಿ ಪ್ರಜ್ಞೆಯಾಗಿ ಬೆಳೆಯುವಲ್ಲಿ ಕನ್ನಡದ ಅನೇಕ ಹಿರಿ ಕಿರಿಯ ಚಿಂತಕಿಯರು ಈ ಚಿಂತನೆ ನೆಲೆಗೊಳ್ಳುವ ಹಾದಿಯಲ್ಲಿ ತಮ್ಮ ಶ್ರಮವನ್ನು ಹಾಕಿದ್ದಾರೆ. ಸ್ತ್ರೀವಾದಿ ವಿಚಾರ ಸಾಹಿತ್ಯ ಅನೇಕ ಕವಲುಗಳಲ್ಲಿ ತನ್ನನ್ನು ಇಂದು ಅಭಿವ್ಯಕ್ತಿಸಿ ಕೊಂಡಿದೆ. ಪ್ರಸ್ತುತ ಲೇಖನವು ಸ್ತ್ರೀವಾದಿ ಚಿತನೆಯ ವಿಚಾರ ಸಾಹಿತ್ಯವಾಗಿ ಪ್ರಕಟಗೊಂಡ ನೆಲೆಯನ್ನು ಮಾತ್ರ ಗಮನಿಸಿದೆ.ಕಾವ್ಯ, ಕತೆ, ಕಾದಂಬರಿ, ವಿಮರ್ಶೆ ಈ ಎಲ್ಲದರ ಮೂಲಕ ಸ್ತ್ರೀವಾದಿ ಚಿಂತನೆ ಇಂದು ಕನ್ನಡದಲ್ಲಿ ಮುಖ್ಯ ತಾತ್ವಿಕ ಚಿಂತನೆಯಾಗಿ ಬೆಳೆದು ನಿಂತಿದೆ.

## ಗ್ರಂಥ ಋಣ


1. "ಆಧುನಿಕ ಭಾರತದಲ್ಲಿ ಮಹಿಳೆ" ಅನು: ಡಾ.ಹೆಚ್.ಎಸ್ ಶ್ರೀಮತಿ ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ-೨೦೦೧
2. "ಶ್ಯಾಮಲಾ ಸಂಚಯ"-ಸಂ ವಿಜಯದಬ್ಬೆ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು.೧೯೯೨
3. "ಕನ್ನಡಮಹಿಳಾ ಸಾಹಿತ್ಯ ಚರಿತ್ರೆ"-ಎಚ್.ಎಸ್.ಶ್ರೀಮತಿ ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ-೨೦೦೬
4. "ಮಹಿಳೆ ಬಿಡುಗಡೆ ಹಾದಿಯಲ್ಲಿ"-ಎನ್.ಗಾಯಿತ್ರಿ ನವ ಕರ್ನಾಟಕ ಪ್ರಕಾಶನ ಬೆಂಗಳೂರು-೧೯೯೬
5. ಸುಮಿತ್ರಾ ಬಾಯಿ ಬಿ.ಎನ್ ಮತ್ತು ಗಾಯಿತ್ರಿ ಎನ್ (ಸಂ) ವಿಮರ್ಶೆಯ ಹಾದಿ ಜಾಗೃತಿ ಪ್ರಕಾಶನ ಬೆಂಗಳೂರು.
6. "ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ"-ವಿಚಾರ ಸಾಹಿತ್ಯ ಸಂಪುಟ-೭ ಸಂ.ಆರ್ ತಾರಿಣಿ ಶುಭದಾಯಿನಿ, ಪ್ರಧಾನ ಸಂ.ಡಾ.ವಿಜಯಶ್ರೀ ಸಬರದ ಪ್ರಸಾರಾಂಗ ಕರ್ನಾಟಕ ರಾಜ್ಯ ಮಹಿಳಾ ವಿಶ್ವ ವಿದ್ಯಾಲಯ.ವಿಜಾಪುರ -೨೦೧೩